ಓಎಸ್. 35/2013
ಪಿಡಬ್ಲ್ಯೂ-1

ದಿನಾಂಕ 30-10-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು.

<u>ಪಾಟೀ ಸವಾಲುಃ- 1 ನೇ ಪ್ರತಿವಾದಿ ಪರ ವಕೀಲರಿಂದಃ-</u>

ನನ್ನ ಅಜ್ಜ ತಿಮ್ಮಯ್ಯನಿಗೆ ಇಬ್ಬರು ಹೆಂಡತಿಯರು. ಮೊದಲನೆಯ ಹೆಂಡತಿಯ ಹೆಸರು ಜಯಮ್ಮ. 2 ನೇ ಹೆಂಡತಿಯ ಹೆಸರು ತಂಗಮ್ಮ. ನನ್ನ ತಾಯಿ ಮೊದಲನೆ ಹೆಂಡತಿಯ ಮಗಳು ಎಂದರೆ ನಿಜ. 1 ನೇ ಪ್ರತಿವಾದಿ 2 ನೇ ಹೆಂಡತಿಯ ಮಗಳು. ನನ್ನ ತಂದೆಯ ಹೆಸರು ಶಂಕರದೇವ. ನನಗೆ ನನ್ನ ತಾಯಿ ಮದುವೆಯಾದ ದಿನಾಂಕ ನೆನಪಿಲ್ಲ. 1 ನೇ ಪ್ರತಿವಾದಿಗೆ ಮೂರು ಮಕ್ಕಳಿದ್ದಾರೆ ಎಂದರೆ ನಿಜ. ಕಮಲ ತಂಗಮ್ಮನ ಮಗಳು. ಆರ್.ಟಿ.ಸಿಯಲ್ಲಿ ಕಮಲ ಎನ್ನುವವರ ಹೆಸರು ಇದೆ. ನಿಪಿ-7 ರಲ್ಲಿ ತೋರಿಸಿದಂತೆ ದೀಪ್ತಿ, ಸುಶ್ಮಿತ, ಕಾವೇರಿ 1 ನೇ ಪ್ರತಿವಾದಿಯ ಮಕ್ಕಳು. ತಿಮ್ಮಯ್ಯ, ಅಪ್ಪಣ್ಣ ಮತ್ತು ಅಣ್ಣಯ್ಯ ಇವರು ಮೂರು ಜನ ಅಣ್ಣತಮ್ಮಂದಿರು. ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ. ವಾದಪತ್ರದಲ್ಲಿಯೂ ಸಹ ಅವರ ಹೆಸರಿನ್ನು ತೋರಿಸಿಲ್ಲ. ನಿಂಗಮ್ಮ ಅಪ್ಪಣ್ಣನ ಹೆಂಡತಿ. ತಿಮ್ಮಯ್ಯ ಬಿನ್ ವೆಂಕಟಯ್ಯ ಯಾರು ಎಂದು ಗೊತ್ತಿಲ್ಲ. ನಿಪಿ-24 ರಲ್ಲಿರುವ ಹೆಸರುಗಳ ವ್ಯಕ್ತಿಗಳು ಅಪ್ಪಣ್ಣನ ಮಕ್ಕಳು. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲ. ನಿಪಿ-28 ರಲ್ಲಿರುವ ಬಾಲಕೃಷ್ಣ, ಬೋಜಪ್ಪ, ಆನಂದರಾಮು ಮತ್ತು ಬಸವರಾಜು ಯಾರೆಂದು ಗೊತ್ತಿಲ್ಲ. ಅವರು ನಮ್ಮ ದಾಯಾದಿಗಳು. ಪ್ರಮಾಣಪತ್ರದಲ್ಲಿ ನನ್ನ ತಾಯಿ ಆಸ್ತಿ ಪಡೆದುಕೊಂಡರೆಂದು ತೋರಿಸಿದ್ದೇನೆ ಎಂದರೆ ಸರಿಯಲ್ಲ. ತಂಗಮ್ಮ 2000-2001 ನೇ ಇಸವಿಯಲ್ಲಿ ಮೃತರಾಗಿದ್ದಾರೆ. 1997 ರಲ್ಲಿ ನನ್ನ ತಾಯಿ ತೀರಿಕೊಂಡಿದ್ದಾರೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವೇಳೆ ಕೇಳಲಾಗಿ ನೀಡಲಾಯಿತು)**

<u>ಮರು ವಿಚಾರಣೆಃ</u>- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೇ ಸ ಇ ಎ ಒ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂಃ ವಿರಾಜಪೇಟೆ.

(ಸಾಕ್ಷಿದಾರರ ಸಹಿ)